



# ಮರದ ಮೇಲೆ ಕಾಮನಬಿಲ್ಲು!

**ಕೆಂ**ಪು, ನೇರಳೆ, ಹಸಿರು ಮುಂತಾದ ಬಣ್ಣಗಳಿಂದ ಕೂಡಿದ ಕಾಮನಬಿಲ್ಲನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಈ ವರ್ಣಗಳು ಮರದ ಕಾಂಡದಲ್ಲಿ ಮೇಳೈಸಿದ್ದರೆ ಹೇಗೆ? ನಿಜಕ್ಕೂ ಆ ಚೆಂದವನ್ನು ವರ್ಣಿಸುವುದು ಕಷ್ಟ.

ಉತ್ತರಾರ್ಧ ಗೋಳದಲ್ಲಿ ಯೂಕಲಿಪ್ಟಸ್ ಮರಗಳಲ್ಲಿ ಈ ರೀತಿ ಹಳದಿ, ಹಸಿರು, ಕಿತ್ತಳೆ, ನೇರಳೆ ಮುಂತಾದ ಹಲವು ಬಣ್ಣಗಳು ಮೇಳೈಸಿರುವುದು ಕಂಡು ಬರುತ್ತದೆ. ಅದರಲ್ಲಿ ರೈನ್ ಬೋ ಯೂಕಲಿಪ್ಟಸ್ ಎಂಬ ಅಪರೂಪದ ಜಾತಿಯ ಮರಗಳು ಸುಮಾರು 70 ಮೀಟರ್ ಎತ್ತರದವರೆಗೂ ಬೆಳೆಯುತ್ತವೆ. ಇವು ಕಾಮನಬಿಲ್ಲಿನಂತೆ ಹೊಳೆಯುತ್ತಾ ನೋಡುವವರ ಮನಸ್ಸನ್ನು ಆಹ್ಲಾದಗೊಳಿಸುತ್ತವೆ. ಪ್ರಪಂಚದಲ್ಲೇ ಅಪರೂಪದ ಬಹುವರ್ಣದ ಮರಗಳೆಂಬ ಹೆಗ್ಗಳಿಕೆ ಇವುಗಳದ್ದು.

■ **ವಿದ್ಯಾ ಹಾಲಭಾವಿ**

